## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:— ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಯಲ್ಲಿ ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಹಣ ಬಿಡುಗಡೆ ಮಾಡುವ ಬಗ್ಗೆ.

೦೦೦

ಓದಲಾಗಿದೆ:—
1) ಜಲ ಸಂಪನ್ಮೂಲ ಇಲಾಖೆಯ (ಸಣ್ಣ ನೀರಾವರಿ) ಪ್ರಧಾನ ಕಾರ್ಯದರ್ಶಿಯವರ ಅರೆ ಸರಕಾರಿ ಪತ್ರ ಸಂಖ್ಯೆ:ಸನೀಇ:241:ಕೆಜಿದು:2000 ದಿನಾಂಕ:6—7—2001 ಹಾಗೂ 27—7—2001 ರ ಅರೆ ಸರಕಾರಿ ಪತ್ರ ಸಂಖ್ಯೆ:ಎಂಐಡಿ:241:ಕೆಜಿದು:2001.
2) ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ದಿನಾಂಕ: 20—9—2001ರ ಪತ್ರ ಸಂಖ್ಯೆ:ಕೆ.ಎನ್.ಎನ್:ಸಿಎಸ್:89:2001:1644
3) ಸರಕಾರದ ಆದೇಶ ಸಂಖ್ಯೆ:(ಕರ್ನಾಟಕ ನೀರಾವರಿ ನಿಗಮ ನಿಯಮಿತದ ಮೆಮೋರೆಂಡಂ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗೆ ತಿದ್ದುಪಡಿ ತರುವ ಬಗ್ಗೆ) ಜಸಂಇ:7: ಕೆಎನ್ಎನ್:2001 ದಿನಾಂಕ:15—12—2001.
4) ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯ ಪ್ರಧಾನ ಕಾರ್ಯದರ್ಶಿಯವರ ದಿನಾಂಕ:5—10—2001ರ ಅರೆ ಸರಕಾರಿ ಪತ್ರ ಸಂಖ್ಯೆ:ಸನೀಇ:241:ಕೆಜಿದು:2000.
5) ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)ಯ ದಿನಾಂಕ:28—11—2001ರ ಆದೇಶ ಸಂಖ್ಯೆ:ಸನೀಇ:241:ಕೆಜಿದು:2000.

KARNATAKA NEERVARI NIGAM LTD.
No: 7257
07 JAN 2002
GM(F) / CS
BANGALORE-560 001

ಪ್ರಸ್ತಾವನೆ:—

ಮೇಲೆ (1) ರಲ್ಲಿ ಓದಲಾಗಿರುವ ಅರೆ ಸರಕಾರಿ ಪತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಹಣಕಾಸು ನೆರವು ನೀಡಲು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಮೆಮೋರೆಂಡಂ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗೆ ಅಗತ್ಯ ತಿದ್ದುಪಡಿ ತರುವಂತೆ ಹಾಗೂ ಇದಕ್ಕೆ ಹಣಕಾಸು ನೆರವು ನೀಡುವಂತೆ ಸದರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಿದ್ದಾರೆ.

ಮೇಲೆ (2) ರಲ್ಲಿ ಓದಲಾಗಿರುವ ಸರಕಾರದ ಆದೇಶದಲ್ಲಿ ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಯ ಪ್ರಸ್ತಾವನೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು : ಉತ್ತೇಜಿಸಲು ಕರ್ನಾಟಕ ನೀರಾವರಿ ನಿಗಮ ನಿಯಮಿತದ ಮೆಮೋರೆಂಡಂ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗೆ ಸೂಕ್ತ ತಿದ್ದುಪಡಿ ಮಾಡುವಂತೆ ನಿರ್ದೇಶನ ನೀಡಲಾಗಿದೆ.

ಮೇಲೆ (4) ರಲ್ಲಿ ಓದಲಾಗಿರುವ ಅರೆ ಸರಕಾರಿ ಪತ್ರದಲ್ಲಿ ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳುವ ಕಾರ್ಯಕ್ರಮಕ್ಕೆ 2001—2002ನೇ ಸಾಲಿನಲ್ಲಿ ನಿಗದಿ ಪಡಿಸಿರುವ 20.00 ಕೋಟಿ ರೂಪಾಯಿಗಳನ್ನು( ಇಪ್ಪತ್ತು ಕೋಟಿ ರೂಪಾಯಿಗಳು ಮಾತ್ರ) ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಪಡೆದು ಅದನ್ನು ಉಪಯೋಗಿಸುವ ಕುರಿತು ಕಾರ್ಯವಿಧಾನವನ್ನು ತಿಳಿಸಲು ಕೋರಿದ್ದಾರೆ.

ಮೇಲೆ (5) ರಲ್ಲಿ ಓದಲಾಗಿರುವ ಆದೇಶದಲ್ಲಿ ರಾಜ್ಯದಲ್ಲಿನ ಪ್ರತಿ ಹೋಬಳಿಯಲ್ಲಿ ಒಂದು ಕೆರೆಯ ಪುನರುಜ್ಜೀವನಕ್ಕಾಗಿ ರೂಪಿಸಲಾಗಿರುವ ಯೋಜನೆಯ ಕಾಮಗಾರಿಯನ್ನು ಹಂತ ಹಂತವಾಗಿ ಮುಗಿಸಿ, ಬಿಲ್ಲುಗಳನ್ನು ತಯಾರಿಸಿ, ದೃಢೀಕರಿಸಿ, ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಹಣ ಪಡೆಯಬಹುದಾಗಿದೆ ಎಂದೂ ಹಾಗೂ 2001—2002ನೇ ಸಾಲಿನಲ್ಲಿ ಈ ಯೋಜನೆಗೆ ಸದರಿ ನಿಗಮದಲ್ಲಿ 20.00 ಕೋಟಿ (ಇಪ್ಪತ್ತು ಕೋಟಿ ರೂಪಾಯಿಗಳು ಮಾತ್ರ) ರೂಪಾಯಿಗಳನ್ನು ಮೀಸಲಾಗಿರಿಸು—ವುದೆಂದು ತಿಳಿಸಲಾಗಿದೆ.

ಜಲ ಸಂಪನ್ಮೂಲ ಇಲಾಖೆಯ (ಸಣ್ಣ ನೀರಾವರಿ) ಪ್ರಧಾನ ಕಾರ್ಯದರ್ಶಿಯವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರಕಾರದ ಆದೇಶ ಸಂಖ್ಯೆ:ಜಸಂಇ:167:ಕೆಬಿಎನ್:2001, ಬೆಂಗಳೂರು, ದಿನಾಂಕ:31—12—2001.

ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಹಣಕಾಸು ವರ್ಷ 2001—2002ರ ಸಾಲಿನಲ್ಲಿ ನಿಗದಿಪಡಿಸಿರುವ ರೂ.20.00 ಕೋಟಿಗಳನ್ನು ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇವರಿಗೆ ಆರ್ಥಿಕ ಇಲಾಖೆಯ ಮುಖಾಂತರ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿದೆ.

2) ಕರ್ನಾಟಕ ನೀರಾವರಿ ನಿಗಮ ನಿಯಮಿತವು ಸದರಿ ಹಣವನ್ನು ಜಲ ಸಂಪನ್ಮೂಲ ಇಲಾಖೆಯ (ಸಣ್ಣ ನೀರಾವರಿ) ನಿಯತಕಾಲಿಕ ಕೋರಿಕೆಯಂತೆ ಹಾಗೂ ಹಣಕಾಸು ಇಲಾಖೆಯ ನಿರ್ದೇಶನದಂತೆ ಸರಕಾರದ ಖಜಾನೆಯಲ್ಲಿ ಠೇವಣಿ (ಜಮಾ) ಮಾಡತಕ್ಕದ್ದು. ತದನಂತರ ಹಣಕಾಸು ಇಲಾಖೆಯು ಈ ಹಣವನ್ನು ಈ ಕೆಳಕಂಡ ನಿಬಂಧನೆಗೆ ಒಳಪಟ್ಟು, ಅವಶ್ಯಕತೆಗನುಗುಣವಾಗಿ ಬಿಡುಗಡೆ ಮಾಡಲು ಸೂಚಿಸಲಾಗಿದೆ.

" The Minor Irrigation Department is requested to get the works executed prepare the bills with proper certification and forward them for settlement by Government in Finance Department".

3) ಈ ಆದೇಶವನ್ನು ಆರ್ಥಿಕ ಇಲಾಖೆಯ ಲೋಇ:1336:ಅಕೋ:1:2001 ದಿನಾಂಕ: 10-11-2001ರ ಟಿಪ್ಪಣಿಯಲ್ಲಿನ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

[signature]
(ಜೆ.ಸಿ.ಚಿದಂಬರ ಮೂರ್ತಿ),
ಸರಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ),
ಜಲ ಸಂಪನ್ಮೂಲ ಇಲಾಖೆ(ಕೃಭಾಜನಿನಿ ವಿಶೇಷ ಕೋಶ).

ಇವರಿಗೆ,

1) ಮಹಾಲೇಖಪಾಲರು (ಆಡಿಟ್-1), ಕರ್ನಾಟಕ, ಬೆಂಗಳೂರು.
2) ಮಹಾಲೇಖಪಾಲರು (ಆಡಿಟ್-2), ಕರ್ನಾಟಕ, ಬೆಂಗಳೂರು.
3) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ (ಸಣ್ಣ ನೀರಾವರಿ) ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಸರಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾಫಿ ಬೋರ್ಡ್ ಕಟ್ಟಡ, ಬೆಂಗಳೂರು / ವಾಲ್ಮಿ ಕಟ್ಟಡ, ಧಾರವಾಡ.
7) ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ, ಉಪ ಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8) ಉಪ ಕಾರ್ಯದರ್ಶಿಗಳು (ಎಂ.ಎಂ.ಐ), ಉಪ ಕಾರ್ಯದರ್ಶಿಗಳು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ವಿಶೇಷ ಕೋಶ, ಉಪ ಕಾರ್ಯದರ್ಶಿಗಳು, ಸೇವೆಗಳು, ಜಲ ಸಂಪನ್ಮೂಲ ಇಲಾ- ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರಕಾರದ ಅಧೀನ ಕಾರ್ಯದರ್ಶಿ (ಸಣ್ಣ ನೀರಾವರಿ) ಜಲ ಸಂಪನ್ಮೂಲ ಇಲಾಖೆ, ಸೇವೆ-
10) ಸರಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ಬಹುಮಹಡಿಗ- ಬೆಂಗಳೂರು.
11) ರಕ್ಷಾ ಕಡತ : ಹೆಚ್ಚುವರಿ ಪ್ರತಿ.